International Journal of Kannada Research 2016; 2(2): 87-90

International Journal of Kannada Research
www.kannadajournal.com

ISSN: 2454–5813
IJSR 2016; 2(2): 87-90
© 2016 IJKS
www.kannadajournal.com
Received: 14-04-2016
Accepted: 15-05-2016

ಡಾ. ಪಿ. ನಾಗಭೂಷಣಗೌಡ
ಇತಿಹಾಸ ಉಪನ್ಯಾಸಕರು,
ದಾವಣಗೆರೆ ವಿಶ್ವವಿದ್ಯಾನಿಲಯ,
ದಾವಣಗೆರೆ–577002.

**Correspondence**
ಡಾ. ಪಿ. ನಾಗಭೂಷಣಗೌಡ
ಇತಿಹಾಸ ಉಪನ್ಯಾಸಕರು,
ದಾವಣಗೆರೆ ವಿಶ್ವವಿದ್ಯಾನಿಲಯ,
ದಾವಣಗೆರೆ–577002.

# ಪೊಲೀಸ್ ಆ್ಯಕ್ಷನ್ ನಂತರ ಕಾಸಿಂ ರಜ್ವಿ:ಒಂದು ವಿಮರ್ಶಾತ್ಮಕ ಟಿಪ್ಪಣಿ

**ಡಾ. ಪಿ. ನಾಗಭೂಷಣಗೌಡ**

## ಪ್ರಸ್ಥಾವನೆ

**ಪ್ರಸ್ತಾವನೆ**–1948ರ ಸೆಪ್ಟೆಂಬರ್ 13 ರಿಂದ 17 ರವರೆಗೆ ನಡೆದ ಪೊಲೀಸ್ ಕಾರ್ಯಾಚರಣೆಯ ನಂತರ ಹೈದರಾಬಾದ್ ಸಂಸ್ಥಾನದ ಮಾಜಿ ಪ್ರಧಾನಿ ಲೈಕ್ ಅಲಿಯನ್ನು ಸೆಪ್ಟೆಂಬರ್ 18 ರಂದು ಗೃಹಬಂಧನದಲ್ಲಿರಿಸಲಾಗುತ್ತದೆ. 16 ಜಿಲ್ಲೆಗಳ 22,000 ಹಳ್ಳಿಗಳನ್ನೊಳಗೊಂಡ ಇಡೀ ಹೈದರಾಬಾದ್ ಸಂಸ್ಥಾನವನ್ನು ತನ್ನ ಹಿಂಸಾಚಾರಗಳ ಮೂಲಕ ನಡುಗಿಸಿ ಬೆದರಿಕೆಯೊಡ್ಡಿದ್ದ ರಜಾಕಾರ ಪಡೆಯ ಅಧಿನಾಯಕ ಸೈಯದ್ ಕಾಸಿಂ ರಜ್ವಿಯನ್ನು ಸೆಪ್ಟೆಂಬರ್ 19 ರಂದು ಪೊಲೀಸರು ಬಂಧಿಸಿ ಜೈಲಿನಲ್ಲಿಡುತ್ತಾರೆ. ಆದರೆ ಸಿನಿಮೀಯ ರೀತಿಯಲ್ಲಿ ಲೈಕ್ ಅಲಿ 1950ರ ಮಾರ್ಚ್ 6 ರಂದು ಜೈಲಿನಿಂದ ಪರಾರಿಯಾದ ಸುದ್ದಿ ಮರುದಿನ ಮಾರ್ಚ್ 7 ರ ದಿನಪತ್ರಿಕೆಗಳಲ್ಲಿ ಹೆಡ್‌ಲೈನ್‌ಆಗಿ ಬಂದಿರುತ್ತದೆ.

ಲೈಕ್ ಅಲಿ ಪಲಾಯನಗೈದ ಸುದ್ದಿಯಿಂದ ಬೆಚ್ಚಿದ ಸರ್ಕಾರ ಕಾಸಿಂ ರಜ್ವಿಗೆ ಭದ್ರತೆಯನ್ನು ಹೆಚ್ಚಿಸುತ್ತದೆ ಮತ್ತು ಆತನ ವಿರುದ್ಧ ಇದ್ದ ಪ್ರಕರಣಗಳ ತನಿಖೆಯನ್ನು ಚುರುಕುಗೊಳಿಸುತ್ತದೆ. ರಜ್ವಿಯ ವಿರುದ್ಧ ಇದ್ದ ಬಹು ಮುಖ್ಯವಾದ ಮೂರು ಪ್ರಕರಣಗಳು: 1. ಅಳಂದ್ ಶರೀಫ ಕೊಲೆ ಪ್ರಕರಣ 2. 'ಇಮ್ರೋಜ್' ಯುವ ಪತ್ರಕರ್ತ ಶೋಯೆಬುಲ್ಲಾಖಾನನ ಹತ್ಯೆ (ಈತನ ಹತ್ಯೆ ಬಗ್ಗೆ ಹೆಚ್ಚಿನ ವಿವರಕ್ಕಾಗಿ ನೋಡಿ: ಪಿ. ನಾಗಭೂಷಣಗೌಡ ಇವರ ಲೇಖನ "ಸ್ವಾತಂತ್ರ್ಯ ಪ್ರೇಮಿ ಶೋಯೆಬುಲ್ಲಾಖಾನ್", ಸಾಪ್ತಾಹಿಕ ವಿಜಯ, ವಿಜಯ ಕರ್ನಾಟಕ ದೈನಿಕ, ದಿನಾಂಕ 20.08.2000) 3. ಬೀಬೀ ನಗರ ಡಕಾಯಿತಿ ಪ್ರಕರಣ. ಈ ಪ್ರಕರಣಗಳ ವಿಚಾರಣೆಗಾಗಿ ಒಂದು ವಿಶೇಷ ಕೋರ್ಟನ್ನು ರಚಿಸಲಾಗಿರುತ್ತದೆ. ಅದಕ್ಕೆ ವಿಶೇಷ ಟ್ರಿಬ್ಯುನಲ್ ಸಂಖ್ಯೆ 4 ಎಂದು ಹೆಸರು. ವಿಶೇಷವೆಂದರೆ ಈ ಟ್ರಿಬ್ಯುನಲ್‌ನ ಅಧ್ಯಕ್ಷರನ್ನಾಗಿ ಮಂಗಳೂರಿನ ಕ್ರಿಶ್ಚಿಯನ್ ನ್ಯಾಯಾಧೀಶರಾದ ಪಿಂಟೋ ಅವರನ್ನು ನೇಮಿಸಲಾಗುತ್ತದೆ. ಈ ಟ್ರಿಬ್ಯುನಲ್‌ನ ಇತರ ಸದಸ್ಯರೆಂದರೆ ಅಹ್ಮದ್ ಅಲಿ ಖಾನ್ ಮತ್ತು ಜಗನ್ನಾಥರಾವ್. ಒಬ್ಬ ಕ್ರಿಶ್ಚಿಯನ್, ಒಬ್ಬ ಮುಸ್ಲಿಂ ಮತ್ತು ಒಬ್ಬ ಹಿಂದೂ ಎನ್ನುವುದು ಗಮನಿಸಬೇಕಾದ ಅಂಶ.

ಅಲ್ಲದೆ ಸರ್ಕಾರವು ಸ್ಟೇಟ್ ಜ್ಯುಡಿಶಿಯಲ್ ಕಮಿಟಿಯ ಮಾಜಿ ಅಧ್ಯಕ್ಷ ಅಸ್ಕರ್ ಯಾರ್ ಜಂಗ್ ಅವರನ್ನು ಡಿಫೆನ್ಸ್ ಕೌನ್ಸೆಲ್ ಎಂದು ನೇಮಿಸುತ್ತದೆ. (ಈ ಸಮಿತಿಯೇ ಹೈದರಾಬಾದಿನ ಸುಪ್ರೀಂ ಕೋರ್ಟ್ ಆಗಿತ್ತು. ಒಂದೇ ವ್ಯತ್ಯಾಸವೆಂದರೆ ಈ ಸಮಿತಿಯ ತೀರ್ಪುಗಳನ್ನು ನಿಜಾಮ ಪುನರಾವಲೋಕನ ಮಾಡಬಹುದಾಗಿತ್ತು.) ಆದರೆ ಅಸ್ಕರ್ ಅವರಿಗೆ ಇಂತಹ ಕ್ರಾಸ್ ಎಕ್ಸಾಮಿನೇಶನ್ಸ್ ಮಾಡಿದ ಅನುಭವ ಇರದಿದ್ದರಿಂದ ತನ್ನ ಸಂಬಂಧಿ ಬಕರ್ ಹಸನ್ ಎಂಬಾತನನ್ನು ಸಹಾಯಕನನ್ನಾಗಿ ನೇಮಿಸಿಕೊಳ್ಳುತ್ತಾನೆ. ಇನ್ನೊಬ್ಬ ಸಹಾಯಕನೆಂದರೆ ಅಸ್ಕರ್ ಅವರ ಸ್ವಂತ ಮಗ ಮತು ಕಿರಿಯ ವಕೀಲ ಮುಸ್ತಾಫ ಹಸನ್.

ವಿಚಾರಣೆಯನ್ನು ವಹಿಸಿಕೊಂಡ ಅಸ್ಕರ್ ಯಾರ್ ಜಂಗ್ ಶಿಯಾ ಮುಸ್ಲಿಮನಾಗಿದ್ದು ಪೂರ್ತಿ ಶುಲ್ಕದ ಬದಲು ಪ್ರತಿ ಪ್ರಕರಣಕ್ಕೂ 99,000 ರೂಪಾಯಿಗಳನ್ನು ಮಾತ್ರ ಶುಲ್ಕವೆಂದು ಪಡೆಯುತ್ತಾನೆ. ಬಕರ್‌ನಿಗೆ ಪ್ರತಿ ಪ್ರಕರಣಕ್ಕೆ 75,000 ಮತ್ತು ಮಗ ಮುಸ್ತಾಫ ಹಸನ್ನನಿಗೆ 10,000 ಶುಲ್ಕ ನಿಗದಿಯಾಗುತ್ತದೆ. ಸೈಯದ್ ಕಾಸಿಂ ರಜ್ವಿಗೆ ಆಪ್ತ ಸ್ನೇಹಿತನಾಗಿದ್ದ ಯುವ ವಕೀಲನೊಬ್ಬ ಅಸ್ಕರ್ ಅವರ ಬಳಿ ಬಂದು ತನ್ನನ್ನು ಅವರ ಸಹಾಯಕನನ್ನಾಗಿ ನೇಮಿಸಿಕೊಳ್ಳುವಂತೆ ವಿನಂತಿಸುತ್ತಾನೆ. ಆ ಯುವ ವಕೀಲನ ಹೆಸರು ಝೂಹಿದ್ ಅಲಿ ಕಮಿಲ್. ಆತ ಈ ಮುಂಚೆ ಸೊಸೈಟಿ ಫಾರ್ ಯೂನಿಯನ್ ಆ್ಯಂಡ್ ಪ್ರೊಗ್ರೆಸ್ ಸಂಸ್ಥೆಯ ಸದಸ್ಯನಾಗಿದ್ದ. ಪೊಲೀಸ್ ಆ್ಯಕ್ಷನ್ ಸಂದರ್ಭದಲ್ಲಿ ಇತ್ತೆಹಾದ್ ಸಂಸ್ಥೆಯನ್ನು ಸೇರಿದ್ದ. ಭಾರತದಲ್ಲಿ ಕಾಸಿಂ ರಜ್ವಿಯ ಉಳಿದ ಅವಧಿಯಲ್ಲಿ ಆತನ ಜೀವನದಲ್ಲಿ ಒಂದು ಮಹತ್ವದ ಪಾತ್ರ ವಹಿಸಬೇಕೆಂದು ಬಯಸಿದ್ದನಲ್ಲದೆ ಈ ಪ್ರಕರಣದ ಬಗ್ಗೆ ಬರೆಯಲೂ ಕಮೀಲ್ ಉದ್ದೇಶಿಸಿದ್ದ. ಆದರೆ

ಕಮೀಲನನ್ನು ಕಿರಿಯ ವಕೀಲನೆಂದು ನೇಮಿಸಿಕೊಳ್ಳುವ ಬದಲು ಆತನಿಗೆ ನ್ಯಾಯಾಲಯದಲ್ಲಿ ಹಾಜರಾಗಿರಲು ಸಂದರ್ಶಕರ ಪಾಸ್ ಕೊಡುವುದಾಗಿ ಅಸ್ಕರ್ ಹೇಳಿದ್ದರು. ಆದರೆ ಇಂತಹ ಆಫರ್ ಕಮಿಲ್‌ನಿಗೆ ಒಪ್ಪಿಗೆಯಾಗಲಿಲ್ಲ.

ಮೇಲೆ ಹೇಳಿದ ಮೂರು ಕೇಸುಗಳ ಪೈಕಿ ಮೊದಲನೆಯ ಕೇಸು ಅಳಂದ್ ಶರೀಫ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸರಿಯಾದ ಸಾಕ್ಷಿಗಳು ಸಿಗದೇ ಇದ್ದ ಕಾರಣದಿಂದಾಗಿ ಅದನ್ನು ಸರ್ಕಾರ ಹಿಂಪಡೆಯಿತು. ವಿಚಾರಣೆ ವಾದ–ವಿವಾದದ ಹಂತ ತಲುಪಿದಾಗ ಸ್ವತಃ ರಜ್ವಿಯು ನ್ಯಾಯಾಲಯಕ್ಕೆ ಪೆಟಿಷನ್ (ಮನವಿ) ಸಲ್ಲಿಸಿ ತನ್ನ ವಕೀಲರನ್ನು ತೆಗೆದು ಹಾಕಬೇಕೆಂದೂ ತನ್ನ ಪ್ರಕರಣವನ್ನು ತಾನೇ ವಾದ ಮಾಡುವುದಾಗಿ ಹೇಳುತ್ತಾನೆ.

**ತೀರ್ಪು**

ವಾದವಿವಾದವನ್ನು ಆಲಿಸಿದ ಟ್ರಿಬ್ಯೂನಲ್ ಕೋರ್ಟು 1950 ಸೆಪ್ಟೆಂಬರ್ 10ರಂದು ತೀರ್ಪು ನೀಡುತ್ತದೆ. ಬೀಬಿನಗರ ಡಕಾಯಿತಿ ಕೇಸಿನಲ್ಲಿ ಏಳು ವರ್ಷಗಳ ಕಠಿಣ ಶಿಕ್ಷೆಯನ್ನೂ ಶೊಯೆಬುಲ್ಲಾಖಾನ್ ಹತ್ಯೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಯನ್ನೂ ವಿಧಿಸುತ್ತದೆ. ಆದರೆ ಈ ತೀರ್ಪು ಅಭಿಯೋಜಕ(ಸರ್ಕಾರಿ ವಕೀಲ) ರಿಗಾಗಲೀ ಪ್ರತಿವಾದಿಗಾಗಲೀ ತೃಪ್ತಿ ತರುವುದಿಲ್ಲ. ಸರ್ಕಾರಿ ಅಭಿಯೋಜಕರು ಜೀವಾವಧಿ ಶಿಕ್ಷೆಯನ್ನು ಮರಣದಂಡನೆಯನ್ನಾಗಿಸಬೇಕೆಂದೂ ಪ್ರತಿವಾದಿಗಳು ಜೀವಾವಧಿ ಶಿಕ್ಷೆಯನ್ನು ರದ್ದು ಪಡಿಸಬೇಕೆಂದೂ ಉಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸುತ್ತಾರೆ. ಪ್ರತಿವಾದಿಗಳ ಮನವಿ ಎತ್ತಿ ಹಿಡಿದ ಉಚ್ಚ ನ್ಯಾಯಾಲಯವು ಜೀವಾವಧಿ ಶಿಕ್ಷೆಯನ್ನು ರದ್ದು ಪಡಿಸುತ್ತದೆ. ಆದರೆ ಬೀಬೀನಗರ ಡಕಾಯಿತಿ ಪ್ರಕರಣದಲ್ಲಿ ನೀಡಿದ ಏಳು ವರ್ಷಗಳ ಕಠಿಣ ಶಿಕ್ಷೆಯನ್ನು ಪುರಸ್ಕರಿಸುತ್ತದೆ. ಈ ತೀರ್ಪಿನ ವಿರುದ್ಧವೂ ರಜ್ವಿ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಸುತ್ತಾನೆ. ಆದರೆ 1953 ಜನವರಿ 19ರಂದು ಈತನ ಮನವಿಯನ್ನು ತಳ್ಳಿ ಹಾಕುತ್ತದೆ.

ಹೀಗಾಗಿ ರಜ್ವಿಯನ್ನು ಹೈದರಾಬಾದಿನ ಚಂಚಲಗುಡ ಜೈಲಿನಲ್ಲಿ ಸರಳುಗಳ ಹಿಂದೆ ಇಡಲಾಗುತ್ತದೆ. ರಜಾಕಾರರ ಫೀಲ್ಡ್ ಮಾರ್ಶಲ್ ರಜ್ವಿ ಗೆರೆಗಳುಳ್ಳ ಕ್ರಿಮಿನಲ್‌ಗಳ ಸಮವಸ್ತ್ರ ಧರಿಸುತ್ತಾನೆ. ಆತನಿಗೆ ಕೈದಿ ಸಂಖ್ಯೆ 20063 ನೀಡಿ ಜೈಲಿನ ಕಾಂಪೌಂಡಿನೊಳಗೆ ಹುಲ್ಲು ಕತ್ತರಿಸುವ ಕೆಲಸಕ್ಕೆ ಹಚ್ಚಲಾಗುತ್ತದೆ.

ಮೇಲಿನ ಪ್ಯಾರಾದಲ್ಲಿ ತಿಳಿಸಿದ ಯುವ ವಕೀಲ ಝಾಹಿದ್ ಅಲಿ ಕಮಿಲ್ ಚಂಚಲಗುಡ ಜೈಲಿನಲ್ಲಿ ರಜ್ವಿಯನ್ನು ಭೇಟಿಯಾಗಿ ಹೇಳುತ್ತಾನೆ. "ಇಲ್ಲಿ ನೀನು ಸೂಜಿಯಿಂದ ಆನೆಯವರೆಗೆ ಏನನ್ನು ಬೇಕಾದರೂ ಕಳ್ಳಸಾಗಾಟ ಮಾಡಬಹುದು". ಕಮಿಲ್ ಮತ್ತು ರಜ್ವಿ ಇಂತಹ ಅವಕಾಶವನ್ನು ಚೆನ್ನಾಗಿ ಉಪಯೋಗಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಯಾವುದೇ ಪತ್ರಗಳನ್ನು ಹಳೆಯ ಮಾದರಿಯ ಫೌಂಟೇನ್ ಪೆನ್ನಿನ ಇಂಕ್ ಬಾರೆಲ್‌ನಲ್ಲಿ ಸೇರಿಸಿ ಕಳಿಸಲಾಗುತ್ತಿತ್ತು. ನಾಂಪಲ್ಲಿ ರೈಲ್ವೆ ಸ್ಟೇಶನ್ ಬಳಿಯಿರುವ ಮಿಸಾಕ್ ಕಂಪನಿಯಿಂದ ಇವುಗಳನ್ನು ಖರೀದಿಸಿದ್ದ. ರಜ್ವಿಯು ಜೈಲಿನಿಂದ ನೆಹರೂರವರಿಗೆ ಬರೆದ ಖಾರವಾದ ಪತ್ರವೊಂದು ಹೀಗೆಯೇ ಸಾಗಾಣೆಗೊಂಡಿತ್ತು. ರಜಾಕಾರರನ್ನು ಕೆಟ್ಟದಾಗಿ ನಡೆಸಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿ ಅದನ್ನು ಪ್ರತಿಭಟಿಸಿ ಈ ಪತ್ರ ಬರೆದಿದ್ದ. ಅಲ್ಲದೆ ತಾನು ಜೈಲಿನಲ್ಲಿ ಆಮರಣ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ನೀಡಿದ್ದ ಹೇಳಿಕೆಯನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿದ್ದ. ಇದರಿಂದ ಸರ್ಕಾರ ಗಲಿಬಿಲಿಗೊಂಡಿತು.

ಚಂಚಲಗುಡ ಜೈಲಿನಲ್ಲಿ ನಡೆಯುತ್ತಿದ್ದ ಇಂತಹ ಅವ್ಯವಾಹಾರವನ್ನು ತಡೆಯುವಲ್ಲಿ ಅಸಮರ್ಥವಾದ ಸರ್ಕಾರ 1954ರಲ್ಲಿ ರಜ್ವಿಯನ್ನು ಪುಣೆಯ ಯರವಾಡ ಜೈಲಿಗೆ ಸ್ಥಳಾಂತರಿಸಲು ನಿರ್ಧರಿಸಿತು. ರಜ್ವಿ ತನ್ನ ಉಳಿದ ಶಿಕ್ಷೆಯನ್ನು ಅಲ್ಲಿಯೇ ಮುಗಿಸಿದ.

**ಬಿಡುಗಡೆ**

ಸೈಯದ್ ಕಾಸಿಂ ರಜ್ವಿಯ ಶಿಕ್ಷೆಯ ಅವಧಿ ಪೂರ್ಣಗೊಂಡಿದ್ದರಿಂದ 1957ರ ಸೆಪ್ಟೆಂಬರ್ 11ರಂದು ಯರವಾಡ ಜೈಲಿನಿಂದ ಬಿಡುಗಡೆಯಾದ. ಕಮಿಲ್‌ನನ್ನು ಹೊರತುಪಡಿಸಿ ರಜ್ವಿಯ ಹಳೆಯ ಸ್ನೇಹಿತರೆಲ್ಲ ಹಲವು ಕಾರಣಗಳನ್ನು ಹೇಳುತ್ತ ಬಿಡುಗಡೆಯ ಸಂದರ್ಭದಲ್ಲಿ ಸ್ವಾಗತಿಸಲು ನಿರಾಕರಿಸಿದರು. ಅವರಲ್ಲಿ ಯಾರೊಬ್ಬರಿಗೂ ತನಗೆ ರಜಾಕಾರರ ಜೊತೆ ಯಾವುದೇ ಸಂಬಂಧವಿದೆಯೆಂದು ತೋರಿಸಿಕೊಳ್ಳಲು ಬಯಸಲಿಲ್ಲ. ಕಮಿಲ್ ಮಾತ್ರ ರಜ್ವಿಯ ಬಿಡುಗಡೆಯ ದಿನ ಮುಂಜಾನೆಯೇ ತನ್ನ 1948 ಮಾಡೆಲ್‌ನ ಸ್ಟ್ಯಾಂಡರ್ಡ್ ವ್ಯಾನ್‌ಗಾರ್ಡ್ ಕಾರ್ ತೆಗೆದುಕೊಂಡು ಒಬ್ಬ ಮಾಜಿ ರಜಾಕಾರ (ಈಗ ಆತ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ವಾಹನ ಚಾಲಕನಾಗಿ ಸೇರಿಕೊಂಡಿದ್ದ) ಮತ್ತು ಕೋರ್ಟಿನ ಗುಮಾಸ್ತನೊಬ್ಬನ ಜೊತೆ ಕೋರ್ಟಿನ ಹೊರಗಡೆ ನಿರೀಕ್ಷಿಸತೊಡಗಿದರು. ಕಮಿಲ್ ಒಂಬತ್ತು ವರ್ಷ (ವಿಚಾರಣಾ ಅವಧಿ ಸೇರಿ) ಜೈಲಿನಲ್ಲಿದ್ದ ರಜ್ವಿಗಾಗಿ ಹೊಸ ಸೂಟು ಮತ್ತು ಹಣ್ಣು, ಕುರುಕಲು ತಿಂಡಿ, ಶುದ್ಧ ನೀರು, ಟೀ ಮುಂತಾದ ಪದಾರ್ಥಗಳನ್ನು ತೆಗೆದುಕೊಂಡು ಹೋಗುತ್ತಾನೆ. ಕ್ರಮೇಣ ಇಡೀ ಪ್ರದೇಶ ಬಗೆಬಗೆಯ ವಾಹನಗಳಿಂದ ಭರ್ತಿಯಾದದ್ದನ್ನು ಗಮನಿಸುತ್ತಾನೆ. ಮೂರು ವ್ಯಾನುಗಳಲ್ಲಿ ಸಶಸ್ತ್ರ ಪೊಲೀಸರು, ವಿವಿಧ ಅಧಿಕಾರಿಗಳನ್ನು ಹೊಂದಿದ್ದ ಇತರೆ ಮೂವತ್ತು ಕಾರುಗಳು, ಇಪ್ಪತ್ತೈದು ಪತ್ರಕರ್ತ–ಛಾಯಾಗ್ರಾಹಕರ ಒಂದು ತಂಡ ಆ ಪ್ರದೇಶದಲ್ಲಿ ತುಂಬಿಕೊಂಡಿತ್ತು. 9.19ಕ್ಕೆ ಜೈಲಿನ ಗೇಟು ತೆರೆಯಿತು. ಜೈಲು ಅಧಿಕಾರಿಗಳು ನೀಡಿದ್ದ ಬಿಳಿ ಕುರ್ತಾ, ಪಾಯಿಜಾಮ, ತನ್ನೆಲ್ಲ ಸರಂಜಾಮುಗಳನ್ನು ಹೊಂದಿದ್ದ ಎರಡು ಬ್ಯಾಗುಗಳನ್ನು ಹಿಡಿದ ರಜ್ವಿಯ ಕೃಶದೇಹದ ಹಿಂದೆ ಇಬ್ಬರು ಪೊಲೀಸರು ಹೊರಬಂದರು. ಆತ ತುಂಬ ಉದ್ರೇಕಿತನಾದಂತಿದ್ದ. ಕಮಿಲ್ ಮುಂದೆ ಬಂದು ರಜಾಕಾರರ ಅಧಿನಾಯಕನನ್ನು ಅಪ್ಪಿಕೊಂಡ. ರಜ್ವಿ ಕಿರುನಗೆ ಚೆಲ್ಲಿ ಸುತ್ತಲೂ ನೋಡುತ್ತಾನೆ. ಸ್ನೇಹಿತರ ಬಳಗವಾಗಲೀ ಹಿತೈಷಿಗಳಾಗಲೀ ಯಾರೂ ಕಾಣದ್ದು ಆಶ್ಚರ್ಯವನ್ನುಂಟು ಮಾಡುತ್ತದೆ. ಆತನಿಗೆ ಸಿಕಂದರಾಬಾದಿಗೆ ಹೋಗುವ ಸಲುವಾಗಿ ಜೈಲು ಅಧಿಕಾರಿಗಳು ರೈಲಿನ ಪ್ರಥಮದರ್ಜೆ ಬರ್ತ್ ಟಿಕೆಟೊಂದನ್ನು ನೀಡಿರುತ್ತಾರೆ.

ಕಮಿಲ್‌ನ ಮನೆಗೆ ನೇರವಾಗಿ ಕಮಿಲ್‌ನ ಕಾರಿನಲ್ಲಿ ಹೋಗುವುದು ಸುರಕ್ಷಿತ ಎಂದು ಶೀಘ್ರವಾಗಿ ನಿರ್ಧರಿಸಲಾಗುತ್ತದೆ. ರಜ್ವಿಯ ಸುರಕ್ಷತೆಯ ದೃಷ್ಟಿಯಿಂದ ಒಂದು ಪೊಲೀಸ್ ವ್ಯಾನ್ ಮತ್ತು ಅಧಿಕಾರಿಗಳ ಒಂದು ಪಡೆ ಅವರ ಕಾರನ್ನು ಹಿಂಬಾಲಿಸುತ್ತದೆ. ಮರಾಠವಾಡದಲ್ಲಿ ರಜಾಕಾರರ ಕುಖ್ಯಾತ ದೌರ್ಜನ್ಯಗಳು ಬಹಳ ಜನರ ಮನಸ್ಸಿನಲ್ಲಿ ಈಗಲೂ ಹಚ್ಚಹಸಿರಾಗಿಯೇ ಉಳಿದಿದ್ದವು. ಹೀಗಾಗಿ ರಜ್ವಿಯ ಬಿಡುಗಡೆಯ ನಂತರ ಯಾವುದೇ ಅಂತಹ ಘಟನೆ ಮರುಕಳಿಸಿದರೆ ಬರಬಹುದಾದ ಅಪವಾದಗಳನ್ನು ಎದುರಿಸಲು ಸರ್ಕಾರ ಬಯಸಿರಲಿಲ್ಲ. ಹೀಗಾಗಿ ಸರ್ಕಾರ ಬಹು ಜಾಗರೂಕವಾಗಿತ್ತು. ಶೋಲಾಪುರದಲ್ಲಿ ಇಂಧನ ತುಂಬಿಸಿಕೊಂಡ ಕಾರು ಮತ್ತೆ ಹೊರಟಿತು. ಅಲ್ಲಿ ಅಂತಹ ಯಾವ ಅಹಿತಕರ ಘಟನೆಯೂ ನಡೆಯಲಿಲ್ಲ. 12ನೇ ಸೆಪ್ಟೆಂಬರ್ ಬೆಳಗಿನ ಜಾವ 3 ಗಂಟೆಗೆ ತಂಡ ಹೈದರಾಬಾದ್ ತಲುಪಿತು. ಅಲ್ಲಿಂದ ಅರ್ಧ ಗಂಟೆಯಲ್ಲಿ ಅಡಿಕಮೇಟ್‌ನಲ್ಲಿದ್ದ ಕಮಿಲ್‌ನ ಮನೆ ತಲುಪಿತು. ಅಲ್ಲಿ ರಜ್ವಿಯನ್ನು ನೋಡಲು ಸಂದರ್ಶಕರ ತಂಡಗಳು ಬರಲಾರಂಭಿಸಿದವು. ಅಂಥ ಪ್ರಥಮ ತಂಡವೆಂದರೆ

ಜಿಂದಾತಿಲಿಸ್ಮತ್ ಫ್ಯಾಕ್ಟರಿಯ ಕೆಲಸಗಾರರ ತಂಡ. ಆದರೆ ರಜ್ವಿಯ ಹಳೆಯ ಸಹೋದ್ಯೋಗಿಗಳ ಸಂಖ್ಯೆ ಮಾತ್ರ ಅತ್ಯಲ್ಪವಾಗಿತ್ತು. ರಜ್ವಿಗೆ ತಾನೀಗ ಅಪ್ರಸ್ತುತ ಎಂದೆನಿಸಿತು. ಆತ ಇತ್ತೆಹಾದ್‌ನ ಸಾಮಾನ್ಯ ಸಭೆಯನ್ನು ಕರೆದ. 140 ಸದಸ್ಯರ ಪೈಕಿ ಕೇವಲ 40 ಜನ ಮಾತ್ರ ಬಂದಿದ್ದರು. ಪ್ರಮುಖ ಸದಸ್ಯರನ್ನು ಇತ್ತೆಹಾದ್‌ನ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲು ಕೇಳಿದ. ಆದರೆ ಯಾರೊಬ್ಬರು ಒಪ್ಪಲಿಲ್ಲ. ಕೊನೆಗೆ ದೀರ್ಘ ಚರ್ಚೆಯ ನಂತರ ಅಬ್ದುಲ್ ಖೈರ್ ಸಿದ್ದಿಖಿಯ ಹೆಸರನ್ನು ಅಂತಿಮಗೊಳಿಸಲಾಯಿತು. ಆತ ಇತ್ತೆಹಾದ್‌ನ ಪ್ರಧಾನ ಕಾರ್ಯದರ್ಶಿ ಹಾಗು ಕ್ರಿಮಿನಲ್ ಲಾಯರ್ ಆಗಿದ್ದ.

**ಪಾಕಿಸ್ತಾನಕ್ಕೆ ತೆರಳುವ ಬಯಕೆ**

ಸಭೆಯ ನಂತರ ಪತ್ರಕರ್ತರು ರಜ್ವಿಗೆ ಪ್ರಶ್ನೆಗಳ ಸುರಿಮಳೆಗೈಯುತ್ತಾರೆ. ಆದರೆ ತಾನೊಬ್ಬ ಮಾಜಿ ಕೈದಿಯಾಗಿರುವುದರಿಂದ ತಾನು ಸಮರ್ಥಿಸಿಕೊಳ್ಳಲಾರೆ ಎಂದು ಹೇಳಿ "ನಾನು ಪಾಕಿಸ್ತಾನಕ್ಕೆ ಹೋಗುತ್ತೇನೆ" ಎಂದು ಘೋಷಿಸಿದ.

"ಹಾಗಿದ್ದರೆ ಇತ್ತೆಹಾದಿನ ಮುಂದಿನ ಅಧ್ಯಕ್ಷ ಯಾರು?" ಎಂಬ ಪ್ರಶ್ನೆಗೆ ರಜ್ವಿಯು "ಅಬ್ದುಲ್ ಖೈರ್ ಸಿದ್ದಿಖಿ" ಎಂದು ತನ್ನ ಹಿಂದಿನ ಆತ್ಮವಿಶ್ವಾಸದ ಧ್ವನಿಯಲ್ಲಿ ಹೇಳಿದ. ಪತ್ರಿಕಾಗೋಷ್ಠಿ ಮುಗಿದು ಪತ್ರಕರ್ತರು ತಮ್ಮ ನೋಟ್ ಪ್ಯಾಡುಗಳನ್ನು ಮುಚ್ಚಿ ಸಭಾಂಗಣದಿಂದ ಹೊರನಡೆದರು. ಅಲ್ಲಿ ಸಿದ್ದಿಖಿ ಒಳಬರುವುದನ್ನು ಗಮನಿಸಿದ ಪತ್ರಕರ್ತರು "ಅಭಿನಂದನೆಗಳು" ಎನ್ನುತ್ತಾರೆ. ಆಗ ಸಿದ್ದಿಖಿ "ತಾನು ಈ ಆಫರ್ ಒಪ್ಪಿಕೊಂಡಿಲ್ಲ" ಎನ್ನುತ್ತಾನೆ. ರಜ್ವಿಗೆ ಇದರಿಂದ ಆಘಾತವುಂಟಾಗುತ್ತದೆ. ತನ್ನ ಖದರ್ ಹಿಂದಿನಂತೆ ನಡೆಯುವುದಿಲ್ಲ ಎಂಬುದು ಆತನಿಗೆ ಮನವರಿಕೆಯಾಗುತ್ತದೆ. ಮುಂದಿನ ಅಧ್ಯಕ್ಷನಾಗಲು ಬೇರೆ ಸದಸ್ಯರನ್ನು ಮನವೊಲಿಸಲು ಪ್ರಯತ್ನ ನಡೆದು ಕೊನೆಗೆ ಅಬ್ದುಲ್ ವಾಹಿದ್ ಓವೈಸಿಯ ಹೆಸರನ್ನು ನವಾಬ್ ಮೀರ್ ಖಾದಿರ ಅಲಿಖಾನ್ ಅಬುಲ್-ಉಲಾಯಿ ಸೂಚಿಸುತ್ತಾನೆ. ರಜ್ವಿ ಅದನ್ನು ಅನುಮೋದಿಸಿದ. ಆ ಓವೈಸಿಯ ಮೊಮ್ಮಗನೇ ಹೈದ್ರಾಬಾದಿನ ಅಸಾವುದ್ದೀನ್ ಓವೈಸಿ.

ರಜ್ವಿ 1957ರ ಸೆಪ್ಟೆಂಬರ್ 20ರಂದು ಪಾಕಿಸ್ತಾನಕ್ಕೆ ಹೊರಡಲು ನಿಶ್ಚಯಿಸಿದ್ದ. ಆದರೆ ಏರ್‌ಲೈನ್ಸ್‌ನಲ್ಲಿ ಬೇಗಂಪೇಟೆಯಿಂದ ಬಾಂಬೆಗೆ ಎರಡು ಸೀಟುಗಳು ಖಾಲಿಯಿರುವುದಿಲ್ಲ. ದಿ. 18ರಂದು ಸೀಟುಗಳಿವೆ ಎಂದು ಸೂಚಿಸಿದ್ದರಿಂದ ಅವರ ಯೋಜನೆ ಎರಡು ದಿನ ಮುಂಚಿತವಾಗುತ್ತದೆ. ರಜ್ವಿಯ ನಿರ್ಗಮನವನ್ನು ನರೇಂದ್ರ ಲೂಥರ್ ಅವರು ಹೀಗೆ ವರ್ಣಿಸುತ್ತಾರೆ:- "18ನೇ ತಾರೀಖು ಬೆಳಿಗ್ಗೆ ಇತ್ತೇಹಾದಿನ ಅಧಿನಾಯಕ, ರಜಾಕಾರರ ಫೀಲ್ಡ್ ಮಾರ್ಶಲ್, ನಿಜಾಮನನ್ನು ಅಂಕೆಯಲ್ಲಿಟ್ಟುಕೊಂಡಿದ್ದ ಮನುಷ್ಯ, ಭಾರತ ಸರ್ಕಾರವನ್ನು ಕೆಣಕಿ ಅದಕ್ಕೆ ಸವಾಲೆಸೆದಿದ್ದ, ದೆಹಲಿಯ ಕೆಂಪು ಕೋಟೆಯ ಮೇಲೆ ಅಸಫ್‌ಝಾಹಿ ಧ್ವಜ ಹಾರಿಸುವುದಾಗಿ ಘೋಷಿಸಿದ್ದ ಸೈಯದ್ ಕಾಸಿಂ ರಜ್ವಿ ಅಂತಿಮವಾಗಿ ತನ್ನ ಉಂಬಳಿಯೆಂದೇ ಭಾವಿಸಿದ್ದ ನಗರದಿಂದ (ಹೈದರಾಬಾದು) ನಿರ್ಗಮಿಸಿದ" (ನೋಡಿ: ನರೇಂದ್ರ ಲೂಥರ್, ಹೈದರಾಬಾದ್, ಪು.309)

ರಜ್ವಿಯನ್ನು ಬೀಳ್ಕೊಡಲು ಬೆರಳೆಣಿಕೆಯ ಜನ ಮಾತ್ರ ಅದೂ ಗುಪ್ತವಾಗಿ ಕಮಿಲ್‌ನ ಮನೆಗೆ ಬಂದಿದ್ದರು. ಆತನೊಂದಿಗೆ ಕಮಿಲ್ ಮಾತ್ರ ಬಾಂಬೆಗೆ ತೆರಳಿದ. ಬಾಂಬೆ ವಿಮಾನ ನಿಲ್ದಾಣದಲ್ಲಿ ಪತ್ರಕರ್ತನೊಬ್ಬ ರಜ್ವಿಯನ್ನು ಗುರುತಿಸಿ ಆತನಿಗೆ ಕೆಲವು ಪ್ರಶ್ನೆಗಳನ್ನು ಕೇಳಿದ. ತಾನು ನಾಳೆ ಪಾಕಿಸ್ತಾನಕ್ಕೆ ಪಾಕಿಸ್ತಾನಕ್ಕೆ ತೆರಳಲಿರುವುದಾಗಿ ಹೇಳಿದ್ದರಿಂದ ಹೊಸ ಸುದ್ದಿಯನ್ನು ಹೊತ್ತ ಪತ್ರಕರ್ತ ತನ್ನ ಕಚೇರಿಗೆ ತೆರಳಿದ. ರಜ್ವಿಯ ಹೊಸ ಫೋಟೋ ಹೊತ್ತ ವಿಶೇಷ ಪುರವಣಿ ಸಾಯಂಕಾಲ ಹೊರಬಂದಿತ್ತು. ಕಮಿಲ್ ಮತ್ತು ರಜ್ವಿ ಬಾಂಬೆಯ ಆದಾಯ ತೆರಿಗೆ ಇಲಾಖೆಯ ಅಧಿಕಾರಿ ಶೇಕ್ ಅಬ್ದುಲ್ಲ ಅವರ ಕಚೇರಿಯಲ್ಲಿ ಆದಾಯ ತೆರಿಗೆಯ ಕ್ಲಿಯರೆನ್ಸ್ ಪಡೆಯುವುದಕ್ಕಾಗಿ ಕಾಯುತ್ತಿದ್ದಾಗ ಹೊರಗಡೆ ಜನಜಂಗುಳಿ ಸೇರಿದ್ದನ್ನು ಕಮಿಲ್ ಗಮನಿಸಿದ. ಸಶಸ್ತ್ರ ಪೊಲೀಸ್ ಪೇದೆಯೊಬ್ಬ ಕೂಡ ಅಲ್ಲೆಲ್ಲೋ ಕಾಣಿಸಿದ. ಏನೋ ಕುತಂತ್ರ ನಡೆದಿದೆಯೆಂದು ಆತ ಅನುಮಾನಿಸಿ ಇಷ್ಟೊಂದು ಜನ ಸೇರಲು ಕಾರಣವೇನೆಂದು ಶೇಕ್ ಅಬ್ದುಲ್ಲನನ್ನೇ ಕೇಳಿದ. ಶೇಕ್ ಅಬ್ದುಲ್ಲ ತನ್ನ ಟೇಬಲ್ಲಿನ ಡ್ರಾಯರ್‌ನಿಂದ ಪತ್ರಿಕೆಯ ವಿಶೇಷ ಪುರವಣಿಯ ಪ್ರತಿಯೊಂದನ್ನು ರಜ್ವಿಗೆ ಕೊಟ್ಟ. ರಜ್ವಿ ಅಲ್ಲಿದ್ದಾನೆಂದು ಇಡೀ ಬಾಂಬೆಗೆ ಗೊತ್ತಾಗಿತ್ತು.

ರಜ್ವಿಯನ್ನು ಕಮಿಲ್ ಹೋಟೆಲೊಂದಕ್ಕೆ ಕರೆದೊಯ್ದ. ಅಲ್ಲಿ ರೂಮೊಂದರಲ್ಲಿ ಕೂಡಿಹಾಕಿ, ಯಾರು ಬಂದರೂ ಬಾಗಿಲು ತೆರೆಯದಂತೆ ಹೇಳಿ, ಎಲ್ಲ ವ್ಯವಸ್ಥೆ ಸರಿಯಾಗಿದೆಯೇ ಎಂದು ತಿಳಿದುಕೊಂಡು ಬರಲು ಹೊರನಡೆದ. ರಜ್ವಿ ಬಾಂಬೆಯಲ್ಲಿರುವುದರಿಂದ ಮತ್ತು ತನ್ನ ಯೋಜನೆಗಳು ಬಹಿರಂಗಗೊಂಡಿರುವುದರಿಂದ ಕಮಿಲ್‌ನ ದಿಗಿಲು ಇನ್ನಷ್ಟು ಹೆಚ್ಚಾಯಿತು. ಯಾರಾದರೂ ಆತನನ್ನು ಗುಂಡಿಕ್ಕಿ ಕೊಲ್ಲಬಹುದು. ಯಾರಾದರೂ ಆತನಿಗೆ ವಿಷವಿಡಲೂಬಹುದು ಎಂದು ಚಿಂತಿಸಲಾರಂಭಿಸಿದ. ಆದ್ದರಿಂದ ಹೋಟೆಲಿನಲ್ಲಿ ತಾವು ಏನನ್ನೂ ತಿನ್ನಬಾರದೆಂದು ನಿರ್ಧರಿಸಿದ. ತನ್ನ ಆಪ್ತ ತಾನು ತಲುಪಬೇಕಾದ ಸ್ಥಳ ತಲುಪಿದರೆ ಸಾಕು ಎಂಬುದು ಆತನ ಕಳಕಳಿಯಾಗಿತ್ತು. ಮರುದಿನ 19ನೇ ತಾರೀಕು ಕಮಿಲ್ ಟ್ಯಾಕ್ಸಿಯೊಂದನ್ನು ಕರೆದ. ಉಪಹಾರ ಕೂಡ ಸೇವಿಸದೆ ವಿಮಾನ ನಿಲ್ದಾಣದತ್ತ ಹೊರಟರು. ಏರ್‌ಪೋರ್ಟಿನಲ್ಲಿ ನಿರೀಕ್ಷೆಗಿಂತ ಮೊದಲೇ ಅವರನ್ನು ಕಸ್ಟಮ್ಸ್ ಅಧಿಕಾರಿಗಳ ರಜ್ವಿಯನ್ನು ಕರೆದರು. ಆತ ಆರಾಮವಾಗಿ ನಡೆದ. ಆತನ ಲಗೇಜುಗಳನ್ನು ಕೂಲಂಕುಶವಾಗಿ ಪರೀಕ್ಷಿಸಲಾಯಿತು. ವಿಸಿಟರ್ಸ್ ಲಾಂಜ್‌ನಿಂದ ವೈರ್ ಮೆಸ್ ಮೂಲಕ ಪ್ರತ್ಯೇಕಿಸಿದ್ದ ಸ್ಥಳಕ್ಕೆ ಆತ ಬಂದ. ರಜ್ವಿಯನ್ನು ನೋಡಲು ಕೆಲ ಕುತೂಹಲಭರಿತ ವ್ಯಕ್ತಿಗಳು ಅಲ್ಲಿ ಸೇರಿದ್ದರು. ಆತನ ಹಿಂದೆ ಅನತಿ ದೂರದಲ್ಲಿ ಯುವಕನೊಬ್ಬ ನಿಂತಿದ್ದ. ಹಲ್ಲುಕಡಿಯುತ್ತ ತೀವ್ರಕೋಪದಲ್ಲಿದ್ದ ಆತ ಇಬ್ಬರಿಗೂ ಕೇಳುವಂತೆ "ಬಾಸ್ಟರ್ಡ್" ಎಂದ. "ಪಾಕಿಸ್ತಾನಕ್ಕೆ ಹೊಗಲು ಬಿಡದೆ ಅವರನ್ನು ಶೂಟ್ ಮಾಡಬೇಕಿತ್ತು" ಎಂದು ಕೂಗಿದ. ಇವೇ ಭಾರತದಲ್ಲಿ ರಜ್ವಿ ಕೇಳಿಸಿಕೊಂಡ ಕೊನೆಯ ಶಬ್ದಗಳಾಗಿದ್ದವು.

**ಪಾಕಿಸ್ತಾನದಲ್ಲಿ**

ಆ ದಿನ ಸಾಯಂಕಾಲ ರೇಡಿಯೋ ಪಾಕಿಸ್ತಾನ ತನ್ನ ವಾರ್ತಾ ಸಂಚಿಕೆಯನ್ನು ಹವಾಮಾನವನ್ನು ಅನುಲಕ್ಷಿಸಿ ಮುಗಿಸಿತ್ತು. ಅದೆಂದರೆ "ಕರಾಚಿಯಲ್ಲಿ ಹವಾಮಾನ ಇಂದು ತುಂಬಾ ಆಹ್ಲಾದಕರವಾಗಿದೆ" ಅದು ರಜ್ವಿ ಕರಾಚಿಗೆ ಸುರಕ್ಷಿತವಾಗಿ ತಲುಪಿದ್ದಾನೆ ಎಂದು ಸೂಚಿಸಲು ಸಂಕೇತ ಸಂದೇಶವಾಗಿತ್ತು.

ಪಾಕಿಸ್ತಾನದಲ್ಲಿ ರಜ್ವಿಗೆ ಹೇಳಿಕೊಳ್ಳುವಂಥ ಸ್ವಾಗತ ಸಿಗಲಿಲ್ಲ. ಯಾವ ಸಹಕಾರವೂ ಸಿಗಲಿಲ್ಲ. ಯಾರೂ ಆತನ್ನು ಗುರುತಿಸಲಿಲ್ಲ. ಆತನಿಗೆ ಅಲ್ಲಿ ಯಾರೂ ಇರಲಿಲ್ಲ. ಭಾರತದಿಂದ ಹೋಗಿದ್ದ ನಿರಾಶ್ರಿತರಂತೆ ಆತ ಬದುಕಲಾರಂಭಿಸಿದ. ಆತನಲ್ಲಿದ್ದ ಪತ್ರಹರಿತ್ತು ಕ್ಷೀಣಿಸಿತ್ತು. ಆ ನೆಲ ಆತನಿಗೆ ಹೊಸದಾಗಿತ್ತು. ತನ್ನ ಆಸಕ್ತಿಗೆ ಸೂಕ್ತವಾಗದ ಸ್ಥಳವಾಗಿತ್ತು. 1957 ಸೆಪ್ಟೆಂಬರ್ 19ರ ಸಂಜೆಯಿಂದ 12 ವರ್ಷ, ಮೂರು ತಿಂಗಳು, 26 ದಿನ ಪಾಕಿಸ್ತಾನದಲ್ಲಿ ಜೀವನ ಸವೆಸಿದ ಮುಜಾಹಿದ್-ಇ-ಡೆಕ್ಕನ್/ ಶೇರ್-ಇ-ಡೆಕ್ಕನ್ ಸೈಯದ್ ಮುಹಮ್ಮದ್ ಕಾಸಿಂ ರಜ್ವಿ ಕೊನೆಗೆ 1970 ಜನವರಿ 15ರಂದು ತನ್ನ 67 ನೇ ವಯಸ್ಸಿನಲ್ಲಿ ಅಲ್ಲಿಯೇ ತೀರಿ ಹೋದ. ತನ್ನ ಪ್ರೀತಿಯ ಹೈದರಾಬಾದ್ ಸಂಸ್ಥಾನಕ್ಕೆ ಮತ್ತೆಂದೂ ಬರಲಿಲ್ಲ.

**ಕೊನೆಮಾತು**

ಬಹುತೇಕ ಇತಿಹಾಸಕಾರರು ಕಾಸಿಂ ರಜ್ವಿ ಪಾಕಿಸ್ತಾನಕ್ಕೆ ಹೋದ ಮೇಲೆ ಆತನನ್ನು ಕೇಳುವವರೇ ಇರಲಿಲ್ಲ, ಆತನೊಬ್ಬ ಅನಾಥನಂತೆ ಬಾಳಿದನೆಂದು, ಅಳುವವರೂ ಇಲ್ಲದೆ ಸತ್ತುಹೋದನೆಂದು ಬರೆದು ಸಂತೋಷ ಪಟ್ಟಿದ್ದಾರೆ. ಆದರೆ ಡಾ.ಪಿ.ನಾಗಭೂಷಣಗೌಡ ಹೀಗೆ ಹೇಳಿದ್ದಾರೆ:– "ಬಹುಶಃ ಕಾಸಿಂ ರಜ್ವಿಗೆ ತಾನು ಹೈದರಾಬಾದ್ ಸಂಸ್ಥಾನದಲ್ಲಿ ನಡೆಸಿದ್ದ ಹಿಂಸೆಗಾಗಿ ಪ್ರಾಯಃಶ್ಚಿತ್ತ ಪಡೆಯಬಯಸಿದ್ದನೇನೋ! ಸಕಾರಾತ್ಮಕವಾಗಿ ನೋಡುವುದಾದರೆ ಪಾಕಿಸ್ತಾನಕ್ಕೆ ಹೋದಮೇಲೆ ರಜ್ವಿ ತನ್ನ ನಡವಳಿಕೆಗಳನ್ನು ಬದಲಾಯಿಸಿಕೊಂಡು ನೈಜ ಮುಸಲ್ಮಾನನಾಗಿದ್ದ." ಪಾಕಿಸ್ತಾನದಲ್ಲಿ ಮತ್ತೆ ತನ್ನ ವಕೀಲಿ ವೃತ್ತಿಯನ್ನು ಮುಂದುವರೆಸಿದ. ಪಾಕಿಸ್ತಾನದಲ್ಲಿ ಮುಸ್ಲಿಂ ಲೀಗಿನ ನೇತೃತ್ವ ವಹಿಸಿಕೊಳ್ಳುವಂತೆ ಮೂರು ಸಲ ಆಹ್ವಾನ ಬಂದಿತ್ತು. ಆದರೆ ಆತ ಅದನ್ನು ಒಪ್ಪಿಕೊಳ್ಳಲಿಲ್ಲ. ಪಾಕಿಸ್ತಾನದಲ್ಲಿ ಕಾಸಿಂ ರಜ್ವಿಯ ಹಿರಿಯ ಮಗಳು ಡಾ.ಸರ್ವಾರ್ ಸುಲ್ತಾನಾ ಖಾನ್ ಪಾಕಿಸ್ತಾನಿ ಮುಸ್ಲಿಂಲೀಗಿನ ಸದಸ್ಯೆಯಾಗಿದ್ದರು. ಒಮ್ಮೆ ಚುನಾವಣೆಯಲ್ಲಿ ಆಯ್ಕೆಯಾಗಿದ್ದರು. ಕರಾಚಿಯಿಂದ ಎರಡು ಸಲ ಚುನಾವಣೆಗೆ ಕೂಡಾ ಸ್ಪರ್ಧಿಸಿದ್ದರು. ಶ್ರೀಮತಿ ಫೌಜಿಯಾ ಎಜಾಜ್‌ಖಾನ್ 2011ರಲ್ಲಿ ನ್ಯಾಷನಲ್ ಅಸೆಂಬ್ಲಿಯ ಸದಸ್ಯೆಯಾಗಿದ್ದರು. ರಜ್ವಿಯ ಮೊಮ್ಮಗ ಎಂದು ಹೇಳಿಕೊಂಡಿರುವ ಸೈಯದ್ ಬಾಬರ್ ರಜ್ವಿ ಪಾಕಿಸ್ತಾನ್ ಪೀಪಲ್ಸ್ ಪಾರ್ಟಿಯಲ್ಲಿದ್ದರು. ರಜ್ವಿ ನಿಧನನಾದಾಗ ಆಗಿನ ಪ್ರಧಾನಿ ಝುಲ್ಫೀಕರ್ ಅಲಿ ಭುಟ್ಟೋ ವಿಶ್ವಸಂಸ್ಥೆಯನ್ನುದ್ದೇಶಿಸಿ ಭಾಷಣ ಮಾಡುತ್ತಿದ್ದರು. ವಿಷಯ ತಿಳಿದ ಅವರು ಒಂದು ನಿಮಿಷ ಮೌನ ಆಚರಿಸಲು ಮನವಿ ಮಾಡಿದರು. ಆಗ ಅವರು ಹೇಳಿದ್ದು:– "ಈ ದಿನ ಮುಸ್ಲೀಮರು ಒಬ್ಬ ಮಹಾನ್ ನಾಯಕನನ್ನು ಕಳೆದುಕೊಂಡಿದ್ದಾರೆ." ಹೈದರಾಬಾದ್ ಸಂಸ್ಥಾನದ ಬಹುಸಂಖ್ಯಾತ ಜನತೆಗೆ ಖಳನಾಯಕನಾಗಿ ಕಾಣಿಸಿದ್ದ ಕಾಸಿಂ ರಜ್ವಿ ಪಾಕಿಸ್ತಾನದ ಪ್ರಧಾನಿ ಭುಟ್ಟೋ ಅವರಿಗೆ ಮಹಾನ್ ನಾಯಕನಾಗಿ ಗೋಚರಿಸಿದ್ದ.

**ಆಧಾರ ಗಂಥಗಳು**


1. ನರೇಂದ್ರ ಲೂಥರ್., "ಹೈದರಾಬಾದ್: ಎ ಬಯೋಗ್ರಫಿ", ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನವದೆಹಲಿ, 2012
2. ನಾಗಭೂಷಣಗೌಡ ಪಿ., "ಪ್ರಿನ್ಸ್‌ಲೀ ಸ್ಟೇಟ್ಸ್ ಆಫ್ ಮೈಸೂರ್ ಆ್ಯಂಡ್ ಹೈದರಾಬಾದ್" ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ, ಗುಲಬರ್ಗಾ ವಿ.ವಿ. ಕಲಬುರಗಿ, 2000
3. ಜಾನ್ ಜುಬ್ರ್‌ಝ್ಯುಕಿ., "ದ ಲಾಸ್ಟ್ ನಿಜಾಮ್", ಪಾನ್ ಮ್ಯಾಕ್ ಮಿಲನ್ ಆಸ್ಟ್ರೇಲಿಯಾ ಪ್ರೈ.ಲಿ, ಸಿಡ್ನಿ, 2006
4. http://kuntamukkalaprabhakar.blogspot.in/2010/09/kasim-razvi-deserved-capital-punishment.html?m=1
5. ನಾಗಭೂಷಣಗೌಡ ಪಿ., "ಸ್ವಾತಂತ್ರ್ಯ ಪ್ರೇಮಿ ಶೋಯೆಬುಲ್ಲಾಖಾನ್", ಸಾಪ್ತಾಹಿಕ ವಿಜಯ, ವಿಜಯ ಕರ್ನಾಟಕ ದೈನಿಕ, ದಿನಾಂಕ 20.08.2000